**ದಿನಾಂಕಃ 25.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –**

" ಮೇಘನಾ ನಿಲಯ " ಎಂ.ಉದಯ್ ಪ್ರಸಾದ್ ರವರ ಖಾಯಂ ನಿವಾಸ ಎನ್ನುವುದು ಸರಿ . ಸಾಕ್ಷಿ ಮುಂದುವರಿದು ನುಡಿಯುತ್ತಾರೆ ಆರೋಪಿಯೂ ಸಹ ಅವರೊಂದಿಗೆ ಆ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದು. ಆರೋಪಿಯ ಖಾಯಂ ನಿವಾಸ ಯಾವುದಾಗಿತ್ತು ಎಂದು ಹೇಳಲು ಬರುವುದಿಲ್ಲ. ಆರೋಪಿಯ ಖಾಯಂ ನಿವಾಸ 97/3 Colour palet , ಬಸವೇಶ್ವರ ನಗರ್ , ಬೆಂಗಳೂರು ಆಗಿತ್ತು ಎನ್ನುವುದು ಸರಿ . ಸಾಕ್ಷಿ ನುಡಿಯುತ್ತಾರೆ ಆ ಸಮಯದಲ್ಲಿ ಆರೋಪಿ ಮೈಸೂರಿನಲ್ಲಿ ಮನೆಯನ್ನು ಕಟ್ಟುತ್ತಿದ್ದರು ಹಾಗೂ ಬಜಾಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಆರೋಪಿ ಮೈಸೂರಿನಲ್ಲಿ ಮನೆಯನ್ನು ಕಟ್ಟುತ್ತಿದ್ದರು ಎನ್ನುವ ಬಾಬ್ತು ದೋಷಾರೋಪಣೆ ಪಟ್ಟಿಯಲ್ಲಿ ದಾಖಾಲತಿಗಳಲ್ಲಿ ಅಳವಡಿಸಲಾಗಿದೆ. ಆ ಮನೆ ಕಟ್ಟುತ್ತಿದ್ದ ನಿವೇಶನ ಆರೋಪಿಯ ಹೆಂಡತಿಯ ಹೆಸರಿನಲ್ಲಿತ್ತು. ಆ ನಿವೇಶನದಲ್ಲಿ ಆರೋಪಿ ಮನೆಯನ್ನು ಕಟ್ಟುತ್ತಿದ್ದರು. ಆ ಮನೆಯನ್ನು ಇಲಾಖೆಯಿಂದ ಅನುಮತಿಯನ್ನು ಪಡೆದು, ಸಾಲವನ್ನು ಪಡೆದು, ಕಟ್ಟುತ್ತಿದ್ದರು ಎನ್ನುವುದು ಸರಿ. ಈ ಬಗ್ಗೆ ಆರೋಪಿಯ ಪತ್ನಿ ಐ.ಟಿ.ರಿಟರ್ನ್ಸ್ ದಾಖಲಿಸಿದ್ದಾರೆ ಎನ್ನುವುದು ಸರಿ. ಆರೋಪಿಯ ತಮ್ಮ ಎಂ.ಉದಯ್ ಪ್ರಸಾದ್ ರವರ ಹೇಳಿಕೆಯನ್ನು ನಾನು ಮಾಡಿಕೊಂಡಿರುವುದಿಲ್ಲ. ಆರೋಪಿ ಮತ್ತು ಅವರ ತಮ್ಮ ಎಂ.ಉದಯ್ ಪ್ರಸಾದ್ ರವರು ಮೇಘನಾ ನಿಲಯದಲ್ಲಿ ವಾಸ ಮಾಡುತ್ತಿದ್ದರು ಎಂದು , ತನಿಖಾಧಿಕಾರಿಯವರು

ಆ ಮನೆಯನ್ನು ಶೋದನೆ ಮಾಡಿದಾಗ ಆರೋಪಿಗೆ ಸಂಬಂಧಪಟ್ಟ ದಾಖಲಾತಿಗಳು ಆ ಮನೆಯಲ್ಲಿ ಸಿಕ್ಕಿದ್ದರಿಂದ, ಅವರುಗಳು ಒಟ್ಟಿಗೆ ಆ ಮನೆಯಲ್ಲಿ ವಾಸ ಮಾಡುತ್ತಿದ್ದರು ಎನ್ನುವುದನ್ನು ಕಂಡು ಕೊಂಡಿರುತ್ತೇನೆ. ಆರೋಪಿಯ Disproportionate assets ಗೆ ಸಂಬಂಧಪಟ್ಟಂತೆ ಆ ಮನೆಯಲ್ಲಿ ದಾಖಲಾತಿಗಳು ದೊರೆತಿರುತ್ತವೆ. ಸಾಕ್ಷಿ ದೋಷಾರೋಪಣೆ ಪತ್ರ ಭಾಗ –1 ರಲ್ಲಿ ನ ಪುಟ ಸಂಖ್ಯೆ 56 ಮತ್ತು 57 ರಲ್ಲಿ ಈ ಬಗ್ಗೆ ನಮೂದಾಗಿದೆ ಎನ್ನುತ್ತಾರೆ. ಸದರಿ ದಾಖಲಾತಿಗಳಲ್ಲಿ ಆರೋಪಿಯ ಹೆಸರಿನಲ್ಲಿ ಯಾವ ಯಾವ ದಾಖಲೆಗಳು ಇವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ, ಪರಿಶೀಲಿಸಿ, ಆರೋಪಿಯ ಹೆಂಡತಿಯ ಹೆಸರಿನಲ್ಲಿ ಸದರಿ ದಾಖಲೆಗಳು ಇವೆ ಎನ್ನುತ್ತಾರೆ. ಪುಟ ಸಂಖ್ಯೆ 57 ರಲ್ಲಿ ಸೀರಿಯಲ್ ನಂ.187, 188, 189, 190 ರಂತೆ ಆರೋಪಿಯ ಹೆಸರಿನಲ್ಲಿ ದಾಖಲೆಗಳು ಇದ್ದವು ಎನ್ನುತ್ತಾರೆ. ಶೋದನೆಯ ಕಾಲಕ್ಕೆ ಮೇಘನಾ ನಿಲಯದ ನಿವೇಶನ ಯಾರ ಹೆಸರಿನಲ್ಲಿದೆ , ಅದನ್ನು ಕಟ್ಟಿದವರು ಯಾರು, ಎಲ್ಲಿಂದ ಪರವಾನಗೆಯನ್ನು ಪಡೆದಿರುತ್ತಾರೆ ಎನ್ನುವ ಬಗ್ಗೆ ದಾಖಲೆಗಳು ಲಭ್ಯವಾಗಿರುವುದಿಲ್ಲ. ಈ ಬಗ್ಗೆ ನಾನು ಆರೋಪಿಯ ತಂದೆ ತಾಯಿಯ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ. ಸದರಿ ಮನೆಯ Estimate ನ್ನು ತಯಾರಿಸಲು ಪಿಡಬ್ಲ್ಯೂ 3 ಸಹಾಯಕ ಇಂಜಿನಿಯರ್ ನ್ನು ನೇಮಿಸಿ ಅವರಿಂದ Estimate ಪಡೆದುಕೊಂಡಿರುತ್ತೇವೆ ಎನ್ನುವುದು ಸರಿ. ಸದರಿ ಸಾಕ್ಷಿದಾರರು , ಈ ಕಟ್ಟಡವನ್ನು ಯಾವ ವರ್ಷದಲ್ಲಿ ಕಟ್ಟಲಾಯಿತು ಎನ್ನುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಹೇಳಿರುತ್ತಾರೆ ಎನ್ನುವುದು ಸರಿ . ಗೃಹ ಪ್ರವೇಶ ಆಹ್ವಾನ ಪತ್ರಿಕೆಯ ಆಧಾರದ ಮೇಲೆ ಸದರಿ ಮನೆಯನ್ನು ಯಾವ ವರ್ಷದಲ್ಲಿ ಕಟ್ಟಲಾಗಿರುತ್ತದೆ ಎಂದು

ತಿಳಿದುಕೊಂಡಿರುತ್ತೇವೆ. ಪಿಡಬ್ಲ್ಯೂ 3 ಸಹಾಯಕ ಇಂಜಿನಿಯರ್ ಶ್ರೀನಾಗರಾಜ ಕೆ .ಪಿ. ರವರನ್ನು ನೇಮಿಸಿದಾಗ , ಮೇಘನಾ ನಿಲಯದ ಬಾಬ್ತು ನಮ್ಮಲ್ಲಿ ಸದರಿ ನಿವೇಶವನ್ನು ಯಾವ ವರ್ಷದಲ್ಲಿ ಖರೀದಿಸಿದ್ದರು, ನಕ್ಷಯನ್ನು ಯವ ವರ್ಷ ಪಡೆದರು, ಕಚ್ಚಾ ನಕಾಶೆಯನ್ನು ಯಾವಾಗ ಪಡೆದರು ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯ್ತಿ ನೀಡಿದ ಪರವಾನೆಗೆ , ಆ ಮನೆಯನ್ನು ಯಾವ ವರ್ಷದಲ್ಲಿ ಕಟ್ಟಲಾಯಿತು , ಎನ್ನುವ ಬಾಬ್ತು ಎಲ್ಲಾ ದಾಖಲಾತಿಗಳು ನಮ್ಮಲ್ಲಿ ಇದ್ದರೂ ಸಹ ಅವುಗಳನ್ನು ಪಿಡಬ್ಲೂ 3 ರವರಿಗೆ ನೀಡಿರಲಿಲ್ಲ. ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಈ ಬಗ್ಗೆ ನಾನು ಸದರಿ ಗ್ರಾಮ ಪಂಚಾಯ್ತಿಯೊಂದಿಗೆ ಪತ್ರ ವ್ಯವಹಾರ ನಡೆಸಿದಾಗ, ಸದರಿಯವರು, ಕಡತಗಳಲ್ಲಿ ಈ ಬಗ್ಗೆ ಮಾಹಿತಿ ಇರುವುದಿಲ್ಲ, ಎಂದು ನೀಡಿರುವ ಉತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತೆತೇನೆ ಎನ್ನುತ್ತಾರೆ. ನಿಪಿ 2 ರ ಪುಟ ಸಂಖ್ಯೆ 40 ರ ಕ್ರಮ ಸಂಖ್ಯೆ 252 ರ ದಾಖಲಾತಿಗಳು ಮೇಘನಾ ನಿಲಯಕ್ಕೆ ಸಂಬಂಧಪಟ್ಟ ದಾಖಾಲತಿಗಳಾಗಿದ್ದ , ಅವುಗಳನ್ನು ಎಂ.ಉದಯಪ್ರಸಾದ್ ರವರ ಮಲಗುವ ಕೊಠಡಿಯಿಂದ ಅಮಾನತ್ತು ಪಡಿಸಿಕೊಂಡಿದ್ದು , ಸದರಿ ದಾಖಲಾತಿ ನಮ್ಮ ಬಳಿಯಲ್ಲೇ ಇದ್ದವು ಎನ್ನುವುದು ಸರಿ. ನಿಮ್ಮಲ್ಲಿ ಈ ದಾಖಲಾತಿಗಳು ಇದ್ದರು ಸಹ , ಪಿಡಬ್ಲ್ಯೂ 3 ರವರಿಗೆ ಏಕೆ ಇವುಗಳನ್ನು ನೀಡಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆಗಳನ್ನು ನೋಡಿ ಪರಿಶೀಲಿಸಿ , "ಉತ್ತರಿಸಿರುವುದಿಲ್ಲ." ಆ ಮೇಘನಾ ನಿಲಯಕ್ಕೆ ಹೋದಾಗ ಅಲ್ಲಿ ಆರೋಪಿಯ ತಂದೆ ಇರಲಿಲ್ಲ. ದಿಃ 20.04.2011 ರ ನಂತರ ಆರೋಪಿಯ ತಂದೆಯನ್ನು ಕರೆಸಿ ಮೇಘನಾ ನಿಲಯದ ದಾಖಲಾತಿಗಳ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ , ಏಕೆಂದರೆ ಆ ಸಮಯಕ್ಕೆ ಆರೋಪಿಯ

ತಂದೆ ಮೃತ ಪಟ್ಟಿದ್ದರು. ಪಿಡಬ್ಲ್ಯೂ 3 ರವರು ದಿಃ 20.04.2011 ರಂದು ಬೇರೆ ಯಾರನ್ನೋ ನೋಡಿ ಆರೋಪಿಯ ತಂದೆ ಎಂದು ತಿಳಿದುಕೊಂಡಿರಬಹುದು. ಪಿಡಬ್ಲ್ಯೂ 3 ರವರು ನೀಡಿರುವ ನಿಪಿ 7 ತಪ್ಪಾಗಿರುತ್ತದೆ ಎನ್ನುವುದು ಸರಿಯಲ್ಲ. ನಿಪಿ 7 ನ್ನು ನಾನು ಪರಿಶೀಲಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಪಿಡಬ್ಲೂ 16 ರವರು ನಿಪಿ 2 ರಂತೆ ಕ್ರಮ ಸಂಖ್ಯೆ 252 ರಲ್ಲಿ ಇರುವ ದಾಖಾಲತಿಗಳನ್ನು ಅಮಾನತ್ತು ಪಡಿಸಿಕೂಂಡಿರುತ್ತೇನೆ ಎಂದು ಹೇಳಿರುವುದು ಸರಿಯಾರಿಗುತ್ತದೆ. ಪಿಡಬೂಲ್ಯ 16 ರವರು ಈ ಹಿಣಕಲ್ ನ "ಮೇಘನಾ ನಿಲಯಕ್ಕೆ " ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳನ್ನು ಪಡೆದು ಅಮಾನತ್ತು ಪಡಿಸಿಕೂಂಡಿದ್ದರೂ ಸಹ ನಾನು ಅಂತಿಮ ವರದಿಯನ್ನು ಸಲ್ಲಿಸುವಾಗ ಈ ದಾಖಲಗಳ ಬಾಬ್ತು ಅಂತಿಮ ವರದಿಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪಿಡಬ್ಲೂ 16 ರವರು ತಮ್ಮ ವಿಚಾರಣೆಯಲ್ಲಿ, ಮಲ್ಲಯ್ಯನವರು ತಮ್ಮ ಸೇವಾ ಅವಧಿಯಲ್ಲಿ ಮನೆಯನ್ನು ಕಟ್ಟಿರುವ ವಿಷಯ ಕಂಡು ಬಂದಿದ್ದರೂ ಸಹ ಅದನ್ನು ಅಂತಿಮ ವರದಿಯಲ್ಲಿ ನಾನು ಮುಚ್ಚಿಟ್ಟು ನಮೂದಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

2. ನಿಪಿ 2 ರ ಪುಟ ಸಂಖ್ಯೆ 40 ರ ಕ್ರಮ ಸಂಖ್ಯೆ 246 ರಂತೆ ಅಮಾನತ್ತು ಪಡಿಸಿಕೂಂಡಿರುವ ದಾಖಲಾತಿಗಳ ಸ್ವತ್ತುಗಳು ಆರೋಪಿಯ ತಮ್ಮ ಎಂ.ಉದಯ ಪ್ರಸಾದ್ ಮತ್ತು ಅವರ ಹೆಂಡತಿ ಉಷಾ ರವರಿಗೆ, ಅವರ ತಾಯಿ ಪುಟ್ಟಗೌರಮ್ಮ ನವರಿಂದ ಬಂದಿದ್ದು, ಹೀಗಾಗಿ ಸದರಿ ದಾಖಲಾತಿಗಳು ಎಂ.ಉದಯ್ ಪ್ರಸಾದ್ ರವರ ಬಳಿಯಲ್ಲಿ ಇದ್ದವು ಎನ್ನುವುದು ಸರಿ.

3. ಮಲ್ಲಯ್ಯನವರ ಮರಣಾನಂತರ ಸ್ವತ್ತುಗಳು ಪುಟ್ಟಗೌರಮ್ಮನವರಿಗೆ ಬಂದಿದ್ದು ಸದರಿಯವರು ಸದರಿ ಸ್ವತ್ತುಗಳನ್ನು ತಮ್ಮ ಮಗ ಉದಯ್ ಪ್ರಸಾದ್ ಮತ್ತು ಉಷಾ ರವರಿಗೆ ನೀಡಿದ್ದು , ಸದರಿ ಸ್ವತ್ತಿಗೂ , ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ , ಸ್ವತ್ತಿನ ವರ್ಗಾವಣೆಯ ಬಗ್ಗೆ ತನಿಖಾ ಕಾಲದಲ್ಲಿ ಯಾವುದೇ ದಾಖಲೆಗಳು ದೊರೆತಿರುವುದಿಲ್ಲ ಎನ್ನುತ್ತಾರೆ. ಉದಯ್ ಪ್ರಸಾದ್ ಮತ್ತು ಅವರ ಹೆಂಡತಿಯ ಹೇಳಿಕೆಯನ್ನು ನಾನು ಈ ಬಗ್ಗೆ ದಾಖಲಿಸಿಕೊಂಡಿರುವುದಿಲ್ಲ. ಪುಟ್ಟಗೌರಮ್ಮ ರವರು ಈ ಪ್ರಕರಣದ ತನಿಖಾ ಕಾಲದಲ್ಲಿ ನೀಡಿದ್ದ ಪ್ರಮಾಣ ಪತ್ರವನ್ನು ನಾನು ಪರಿಶೀಲಿಸಿರುತ್ತೇನೆ. ಆ ಪ್ರಮಾಣ ಪತ್ರದಲ್ಲಿ ಆಕೆ 2 ನೇ ಸೊಸೆಗೂ ಸಹ ನಾನು ಪಿತ್ರಾರ್ಜಿತ ಸ್ವತ್ತುಗಳನ್ನು ನೀಡಿರುತ್ತೇನೆ ಎಂದು ತಿಳಿಸಿರುತ್ತಾರೆ, ಎನ್ನುವ ಬಗ್ಗೆ ನನಗೀಗ ನೆನಪಿಲ್ಲ. ಈ ಬಗ್ಗೆ ಪುಟ್ಟಗೌರಮ್ಮ ಸ್ಪಷ್ಟೀಕರಣವನ್ನು ತಮ್ಮ ಪ್ರಮಾಣ ಪತ್ರದಲ್ಲಿ ನೀಡಿದ್ದರೂ ಸಹ , ನಾನು ಅಂತಿಮ ವರದಿ ಸಲ್ಲಿಸುವಾಗ , 'ಆರೋಪಿ ಅಕ್ರಮ ಸಂಪಾದನೆಯಿಂದ ಜಮೀನುಗಳನ್ನು ತನ್ನ ತಾಯಿ ಕಡೆಯಿಂದ ಖರೀದಿಸಿ ನಂತರ ತನ್ನ ತಾಯಿಯಿಂದ ತನ್ನ ಹೆಂಡತಿಗೆ ವರ್ಗವಣೆ ಮಾಡಿಸಿರುತ್ತಾರೆ' ಎಂದು ಸುಳ್ಳಾಗಿ ಆರೋಪಿಸಿರುತ್ತೇನೆ ಎನ್ನುವುದು ಸರಿಯಲ್ಲ. ಅಂತಿಮ ವರದಿಯಲ್ಲಿ , ಪುಟ್ಟಗೌರಮ್ಮನವರು ಆರೋಪಿಯ ಹಣಕಾಸು ಸಹಾಯದಿಂದ ಸ್ವತ್ತುಗಳನ್ನು ಖರೀದಿ ಮಾಡಿದ್ದರು ಎನ್ನುವ ಬಗ್ಗೆ ದಾಖಾಲತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳು ಎಂದರೆ, ಪುಟ್ಟಗೌರಮ್ಮ ರವರ ಹೆಸರಿನಲ್ಲಿ ಖರೀದಿಸಿರುವ ಸ್ವತ್ತುಗಳ ಖರೀದಿ ಪತ್ರಗಳು. ಮಲ್ಲಯ್ಯ ರವರು ಅವರ ನಿವೃತ್ತಿಯ ನಂತರ ಆರೋಪಿಯ ಹಣ ಕಾಸು ಸಹಾಯದಿಂದ ಸ್ವತ್ತುಗಳನ್ನು ಖರೀದಿ ಮಾಡಿದ್ದರು

ಎನುನವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ವೀಣಾ ಪ್ರಸಾದ್ ರವರೂ ಸಹ ಆರೋಪಿಯ ಹಣ ಕಾಸು ಸಹಾಯದಿಂದ ಸ್ವತ್ತುಗಳನ್ನು ಖರೀದಿ ಮಾಡಿದ್ದರು ಎನುನವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುತ್ತೇನೆ. ಅವುಗಳು ಎಂದರೆ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳು.

**ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.